UNIFIED PAYMENTS INTERFACE

### ಯುಪಿಐ ಬಳಕೆ: ಇರಲಿ ಎಚ್ಚರಿಕೆ

- ಯುಪಿಐ ಮೂಲಕ ಹಣ ಪಾವತಿಸುವ ಮುನ್ನ ಹಣ ಸ್ವೀಕರಿಸುವವರ ಗುರುತನ್ನು ಖಾತ್ರಿಪಡಿಸಿಕೊಳ್ಳಿ. ಹೆಸರನ್ನು ನಮೂದಿಸುವ ಬದಲು, ಕ್ಯುಆರ್ ಕೋಡ್ ಪಡೆದು ಹಣ ಪಾವತಿಸಿ ಅಪಾಯವನ್ನು ತಗ್ಗಿಸಬಹುದು.
- ದೇಣಿಗೆ ಹಾಗೂ ನೆರವಿನ ಹೆಸರಿನಲ್ಲಿ ವಂಚಕರು ನಕಲಿ ಐಡಿಗಳನ್ನು ಬಳಸುತ್ತಾರೆ. ಇದರಿಂದ ಎಚ್ಚರ ವಹಿಸುವುದು ಸೂಕ್ತ.
- ಸಾರ್ವಜನಿಕ ಸ್ಥಳಗಳಲ್ಲಿ ಮೊಬೈಲ್ ಪಾವತಿ ಮಾಡುವ ಮೊದಲು ಸುತ್ತಮುತ್ತ ವಂಚಕರು ಇಲ್ಲ ಎಂಬುದನ್ನು ಖಾತ್ರಿಪಡಿಸಬೇಕು.
- ಹಣ ಪಾವತಿಗಾಗಿ ಬಹಳಷ್ಟು ಯುಪಿಐ ಆ್ಯಪ್‌ಗಳನ್ನು ಬಳಸುವುದು ಉತ್ತಮ ಕ್ರಮವಲ್ಲ. ಬಹಳಷ್ಟು ಪೇಮೆಂಟ್ ಆ್ಯಪ್‌ಗಳು ಹಲವಾರು ರಿಯಾಯಿತಿ, ಕೊಡುಗೆ, ಕ್ಯಾಶ್‌ಬ್ಯಾಕ್ ಆಮಿಷ ಒಡ್ಡುತ್ತವೆ. ಆದರೆ ಬಹಳಷ್ಟು ಆ್ಯಪ್‌ಗಳನ್ನು ಹೊಂದುವುದು ಕೆಲವೊಮ್ಮೆ ಅಪಾಯಕಾರಿ. ನಮ್ಮ ಅಗತ್ಯಗಳಿಗೆ ಆ್ಯಪ್‌ಗಳು ಇರುವಂತೆ ಎಚ್ಚರ ವಹಿಸುವುದು ಸೂಕ್ತ.

ವರ್ಕ್ ಫ್ರಮ್ ಹೋಮ್‌ನಿಂದಾಗಿ ಆನ್‌ಲೈನ್ ಪಾವತಿ, ಖರೀದಿ ಪ್ರಮಾಣ ಹೆಚ್ಚಳವಾಗಿದೆ. ಇದರೊಂದಿಗೆ ಫೇಸ್‌ಬುಕ್, ಯೂಟ್ಯೂಬ್, ಇನ್‌ಸ್ಟಾಗ್ರಾಂ, ಎಕ್ಸ್, ಲಿಂಕ್‌ಡಿನ್ – ಹೀಗೆ ಸಾಮಾಜಿಕವಾಗಿ ಸಂಪರ್ಕದಲ್ಲಿರುವ ತಾಣಗಳ ಬಳಕೆಯೂ ವ್ಯಾಪಕವಾಗಿದೆ. ಅಕ್ಷರ ಹಾಗೂ ವಿಡಿಯೊ ಚಾಟ್ ಸೌಲಭ್ಯವಿರುವ ವಾಟ್ಸ್‌ಆ್ಯಪ್, ಟೆಲಿಗ್ರಾಂ, ಆನ್‌ಲೈನ್ ಪೇಮೆಂಟ್ ಆ್ಯಪ್‌ಗಳು, ಇ–ವ್ಯಾಲೆಟ್, ಮುಂತಾದವುಗಳಿಂದಾಗಿ ಅಂತರ್ಜಾಲದ ಬಳಕೆ ವ್ಯಾಪಕವಾಗಿದೆ. ಅದಕ್ಕೆ ತಕ್ಕಂತೆಯೇ ಈ ತಾಣಗಳನ್ನೇ ವಂಚಕರು ಅತ್ಯಂತ ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿದ್ದಾರೆ.

### ಯಾರು ಈ ಸೈಬರ್ ವಂಚಕರು?

ವಂಚನೆಯ ಜಾಲದಲ್ಲಿ ಒಬ್ಬ ವ್ಯಕ್ತಿಯಷ್ಟೇ ಇರಬಹುದು ಅಥವಾ ಒಂದು ತಂಡವೂ ಆಗಿರುವ ಸಾಧ್ಯತೆಯಿದೆ. ₹10 ಸಾವಿರದಿಂದ ₹15 ಸಾವಿರವರೆಗೆ ಸೈಬರ್ ಕ್ರೈಂ ಕುರಿತೇ ತರಬೇತಿ ನೀಡುವ ಸಾಕಷ್ಟು ಸಂಸ್ಥೆಗಳಿವೆ. ಅದರಲ್ಲೂ ಫಿಶಿಂಗ್ ಮತ್ತು ರೆಸೆಲ್ಲಿಂಗ್ ಸೈಟ್‌ಗಳ ತರಬೇತಿ ಅಗ್ಗ ಹಾಗೂ ಲೈಂಗಿಕ ಕ್ರಿಯೆಗೆ ಪ್ರಚೋದಿಸಿ ವಂಚಿಸುವ ತರಬೇತಿ ದುಬಾರಿ. ರಾಜಸ್ಥಾನ, ಹರಿಯಾಣಗಳಲ್ಲಿ ಇಂಥ ತರಬೇತಿ ಕೇಂದ್ರಗಳಿರುವ ಕುರಿತು ವರದಿಗಳಿವೆ. ಕೆಲವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನೈಜೀರಿಯಾಕ್ಕೆ ತೆರಳಿ, ಆನ್‌ಲೈನ್ ವಂಚನೆ ತರಬೇತಿ ಪಡೆದು ಬರುತ್ತಿದ್ದಾರೆ ಎಂದು ಅಹಮದಾಬಾದ್ ಪೊಲೀಸರು ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ವಂಚಿಸುವುದರಲ್ಲಿ ನುರಿತ ತಂಡಗಳು ರೈತರ ಜಮೀನುಗಳನ್ನು ಬಾಡಿಗೆಗೆ ಪಡೆದು, ಅಲ್ಲಿ ತಮ್ಮ ಕೇಂದ್ರಗಳನ್ನು ಸ್ಥಾಪಿಸುತ್ತಾರೆ. ಅದರಲ್ಲೂ ಆಧುನಿಕ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಪ್ರವೇಶದಿಂದ ವ್ಯಕ್ತಿಯ ಮುಖಚಹರೆ, ಬೆರಳಚ್ಚು, ಧ್ವನಿ ಸೇರಿದಂತೆ ಏನೆಲ್ಲಾ ನಕಲು ಮಾಡಿ ವಂಚಿಸಲು ಸಾಧ್ಯವೋ ಆ ಎಲ್ಲಾ ಸಾಧ್ಯತೆಗಳನ್ನೂ ಈ ತಂಡಗಳು ಪ್ರಯೋಗಿಸುತ್ತಿವೆ. ತಂತ್ರಜ್ಞಾನ ಬಲ್ಲವರೇ ಸೈಬರ್ ವಂಚಕರಿಗೆ ಮಿಕಗಳಾಗುತ್ತಿರುವಾಗ, ವಂಚನೆಯ ಸ್ವರೂಪ ಅರಿಯದ ಮಕ್ಕಳು, ಮಹಿಳೆಯರು, ಹಿರಿಯರ ಸ್ಥಿತಿ ಊಹಿಸುವುದೂ ಕಷ್ಟ ಎನ್ನುತ್ತಾರೆ ಸಾಫ್ಟ್‌ವೇರ್ ಉದ್ಯೋಗಿ ಪ್ರಶಾಂತ್.

### ಮಾಹಿತಿ ಅಂಗಡಿ ‘ಡಾರ್ಕ್ ವೆಬ್’

ಕೋಟ್ಯಂತರ ಜನರ ವೈಯಕ್ತಿಕ ಮಾಹಿತಿಯನ್ನು ಒದಗಿಸುವ ‘ಡಾರ್ಕ್ ವೆಬ್’ ಎಂಬ ಡಿಜಿಟಲ್ ಅಂಗಡಿ ಸೈಬರ್ ವಂಚಕರ ನೆಚ್ಚಿನ ತಾಣ. ಜನಸಾಮಾನ್ಯರು ಅರಿಯದ ಹಾಗೂ ಅವರ ಬಳಕೆಗೆ ಸುಲಭವಾಗಿ ನಿಲುಕದ ಡಾರ್ಕ್ ವೆಬ್ ತಾಣಗಳಲ್ಲಿ ಲಕ್ಷಗಟ್ಟಲೆ ಜನರ ಮಾಹಿತಿ ಕೇವಲ ₹5 ಸಾವಿರಕ್ಕೆ ಲಭ್ಯ. ಹೀಗೆ ಲಭ್ಯವಾಗುವ ಮಾಹಿತಿಯಲ್ಲಿ ವ್ಯಕ್ತಿಯ ಹೆಸರು, ಮೊಬೈಲ್ ಸಂಖ್ಯೆ, ವಿಳಾಸ, ಬ್ಯಾಂಕ್ ವಿವರ, ಆಧಾರ್ ಅಥವಾ ಪ್ಯಾನ್ ಸಂಖ್ಯೆ ಸಿಗುತ್ತದೆ. ಇದರೊಂದಿಗೆ ವ್ಯಕ್ತಿಯ ಕ್ರೆಡಿಟ್ ಕಾರ್ಡ್ ಇತಿಹಾಸ ಮತ್ತು ಬಳಕೆಯ ರೀತಿಯ ಮಾಹಿತಿಯೂ ಸಿಗಲಿದೆ. ಇವುಗಳಲ್ಲೂ ಹೆಚ್ಚು ಖರ್ಚು ಮಾಡುವ ವ್ಯಕ್ತಿಗಳು, ಪಿಂಚಣಿದಾರರೇ ವಂಚಕರಿಗೆ ಮುಖ್ಯ ಗುರಿ.

